ಬರಗಾಲಕ್ಕೆ ತುತ್ತಾದ ರಾಜ್ಯದ ರೈತರ ಸಹಕಾರಿ ಸಾಲವನ್ನು ಮನ್ನಾ ಮಾಡುವ ಬಗ್ಗೆ

೧೨೫ (೧೩೬) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ೪ ವರ್ಷಗಳಿಂದ ಭೀಕರ ಬರಗಾಲಕ್ಕೆ ತುತ್ತಾದ ನಮ್ಮ ರಾಜ್ಯದ ರೈತರ ಸಹಕಾರಿ ಸಾಲವನ್ನು ಮನ್ನಾ ಮಾಡುವ ಉದ್ದೇಶವೆ ನಾದರೂ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಈ ರೀತಿ ಸತತವಾಗಿ ಬರಗಾಲಕ್ಕೆ ತುತ್ತಾಗಿ ಸಂಪೂರ್ಣ ಬೆಳೆ ನಾಶವಾದ ರೈತ ಜೀವನ ಮಾಡುವುದೇ ಕಷ್ಟವಾಗಿರುವ ಪರಿಸ್ಥಿತಿಯಲ್ಲಿ ಸಾಲ ಮರುಪಾವತಿ ಮಾಡಲು ರೈತರಿಗೆ ಕಾಲಾವಕಾಶ ಕೊಡುವರೇ?

ಇ) ರೈತರ ವಾಸ್ತವಿಕ ಪರಿಸ್ಥಿತಿ ತಿಳಿಯಲು ಸದನದ ಒಂದು ಸಮಿತಿಯನ್ನು ರಚಿಸುವರೇ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಇಲ್ಲ.

ಆ) ಜಿಲ್ಲಾಧಿಕಾರಿಗಳು ಘೋಷಿಸುವ ಬೆಳೆ ಇಳುವರಿಯು ಆರಾಣಿಗಿಂತ ಕಡಿಮೆ ಇದ್ದಲ್ಲಿ ಮಾತ್ರ ಅಲ್ಪಾವಧಿ ಸಾಲವನ್ನು ಮಾಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲಾಗುವುದು ಹಾಗೂ ಪರಿವರ್ತಿಸಿದ ಅಲ್ಪಾವಧಿ ಸಾಲವನ್ನು ೩ ವರ್ಷಗಳೊಳಗಾಗಿ ಮರುಪಾವತಿ ಮಾಡಲು ಕಾಲಾವಕಾಶ ವಿರುತ್ತದೆ.

ಇ) ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವ ರೀತಿಯ ಪ್ರಸ್ತಾವನೆಯು ಸದ್ಯಕ್ಕೆ ಸಹಕಾರ ಇಲಾಖೆಯ ಮುಂದೆ ಇರುವುದಿಲ್ಲ.

ಹಸಿರು ಪಟ್ಟಿ ಕಾಯಿದೆ ಸಡಿಲಿಸುವ ಬಗ್ಗೆ

೧೨೭ (೯೯) ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಬೆಂಗಳೂರು, ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಹಸಿರು ಪಟ್ಟಿ ಕಾಯದೆ ಸಡಿಲಪಡಿಸಿ ಹರಿಜನ ಗಿರಿಜನರಿಗೆ ನಿವೇಶನಗಳನ್ನು ಹಂಚುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಮಾಜಿ ಪಟೇಲರಿಗೆ ಮಾಸಾಶನ ನೀಡುವ ಬಗ್ಗೆ

೧೨೮ (೧೭೦) ಶ್ರೀ ಬಿ. ಎಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಕಂದಾಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಬಹುತೇಕ ಎಲ್ಲಾ ಕಡೆ ಮಾಜಿ ಪಟೇಲರಿಗೆ ಮಾಸಾಶನ ಮಂಜೂರಾಗಿದ್ದರೂ ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲ್ಲೂಕಿನ ಮಾಜಿ ಪಟೇಲರಿಗೆ ಮಾಸಾಶನ ಈವರೆಗೂ ಮಂಜೂರು ಮಾಡಿರುವುದಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?